


ಸಂಪುಟ: 10 | ಜುಲೈ – ಸೆಪ್ಟೆಂಬರ್ 2024 | ಸಂಚಿಕೆ: 1

# ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ರೈತರಿಂದ ನೇರವಾಗಿ ಗ್ರಾಹಕರಿಗೆ ಹಲಸಿನ ಹಣ್ಣಿನ ಮಾರಾಟ

ತುಮಕೂರು ಜಿಲ್ಲೆಯಲ್ಲಿ ಹಲಸು ಹೆಚ್ಚಾಗಿ ಬೆಳೆಯುತ್ತಿದ್ದು, ತುಮಕೂರು ಹಲಸಿನ ಹಣ್ಣಿಗೆ ಬೇಡಿಕೆ ಹೆಚ್ಚಾಗಿದೆ. ಸಿದ್ದು ಹಲಸು, ಶಂಕರ ಹಲಸು ಹೀಗೆ ವಿವಿಧ ತಳಿಗಳು ಚಾಲ್ತಿಯಲ್ಲಿವೆ. ಕೆಂಪು ತೊಳೆಯ ಹಲಸು ಜನರಿಗೆ ಹೆಚ್ಚು ಪ್ರಿಯ.ಇಲ್ಲಿ ಅನೇಕ ರೈತರು ತಮ್ಮ ಹೊಲಗಳಲ್ಲಿ ಮೂರು–ನಾಲ್ಕು ಗಿಡಗಳನ್ನು ಹಾಕಿ ಅದರಿಂದ ಬರುವ ಹಣ್ಣುಗಳನ್ನು ನೆಂಟರಿಷ್ಟರಿಗೆ ಕೊಟ್ಟು ಸುಮ್ಮನಾಗುತ್ತಾರೆ. ಇದರಿಂದ ಆದಾಯ ಪಡೆಯುತ್ತಿಲ್ಲ. ಈ ಹಲಸೂ ಒಂದು ಆದಾಯ ತರುವ ಉತ್ಪನ್ನ ಎನ್ನುವುದನ್ನು ತೋರಿಸಲು ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ತಾಲ್ಲೂಕು, ತುಮಕೂರು ವತಿಯಿಂದ ದಿನಾಂಕ 18.07.2024, 26.07.2024, 03/08/2024 ಮತ್ತು 13/08/2024 ರಂದು ಯಶಸ್ವಿಯಾಗಿ ಆಯೋಜಿಸಿದ್ದು, ಮೇಲ್ಕಂಡ ದಿನಗಳಂದು ಕೇಂದ್ರಕ್ಕೆ ಹತ್ತಿರವಿರುವ ಶಿವಮೊಗ್ಗ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಪಕ್ಕದ ಗ್ರಾಮದ ರೈತರಾದ ಕುಮಾರಣ್ಣನವರು, ಯೋಗನಂದವಮೂರ್ತಿರವರು ಮತ್ತು ಭರತ್‌ರವರನ್ನು ಗುರುತಿಸಿ ಅವರ ತೋಟದಲ್ಲಿರುವ ಕೆಂಪು ಹಲಸು, ಹಂತು ರಹಿತ ಹಲಸು ಮತ್ತು ಸ್ಥಳೀಯ ಹಲಸಿನ ಹಣ್ಣುಗಳನ್ನು ನೇರವಾಗಿ ಮಾರಾಟ ಮಾಡಲು ಪ್ರೇರೇಪಿಸಿ, ಅವರಿಗೆ ಬೇಕಾದ ಸೌಲಭ್ಯಗಳನ್ನು ಅಂದರೆ ಮಳಿಗೆ, ಟೇಬಲ್‌ಗಳು, ಶುಚಿತ್ವಕಾಪಾಡಲು ಪರಿಕರಗಳು, ಪ್ಯಾಕಿಂಗ್, ಕೆವಿಕೆಯ ಬ್ರಾಂಡ್ ಸಮೃದ್ಧಿಯಡಿಯಲ್ಲಿ ಹಲಸಿನ ಹಣ್ಣಿನ ಮಾರಾಟ ಯಶಸ್ವಿಯಾಗಿ ನಡೆಯಿತು. ಸುಮಾರು 3 ಗಂಟೆ ಅವಧಿಯಲ್ಲಿ 25ಕ್ಕೂ ಹೆಚ್ಚು ಹಣ್ಣುಗಳನ್ನು ಹಾಗೂ ಹಣ್ಣಿನ ತೊಳೆಗಳನ್ನು ಮತ್ತು ಮೌಲ್ಯವರ್ಧಿತ ಪದಾರ್ಥಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಿ ಸುಮಾರು 5000 ರೂಪಾಯಿಗಳಷ್ಟು ಆದಾಯ ಗಳಿಸಲಾಯಿತು. ಸಾಕಷ್ಟು ಸಂಖ್ಯೆಯಲ್ಲಿ ಗ್ರಾಹಕರು ಜಮಾಯಿಸಿ ಖುಷಿಯಿಂದ ಹಣ್ಣುಗಳನ್ನು ಸವಿದರು. ರೈತರು ತಮ್ಮ ಸಂಕೋಚ ಮನೋಭಾವವನ್ನು ತೊರೆದು ನೇರವಾಗಿ ತಾವು ಬೆಳೆದ ಕೃಷಿ/ತೋಟಗಾರಿಕೆ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡಿದರೆ ಅಧಿಕ ಆದಾಯ ಗಳಿಸಬಹುದು.

ಕೆವಿಕೆಯ ಮಾರ್ಗದರ್ಶನದಲ್ಲಿ ಹಾಗೂ ಅವರ ಪ್ರೇರೇಪಣೆಯಿಂದ ನನ್ನ ಹಲಸಿನ ಹಣ್ಣನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾರಾಟ ಮಾಡಿ ಉತ್ತಮ ಆದಾಯಗಳಿಸಿದೆ.

**ಕುಮಾರಣ್ಣ, ತಿಮ್ಲಾಪುರ**



ರೈತರು ಬರೀ ಉತ್ಪಾದಕರಾಗದೆ, ಮಾರಾಟಗಾರರೂ ಆಗಬೇಕು, ಆಗ ಮಾತ್ರ ಆದಾಯ ಗಳಿಸಲು ಸಾಧ್ಯ. ಕೆವಿಕೆಯವರು ಈ ರೀತಿ ರೈತರಿಗೆ ತಿಳುವಳಿಕೆ ನೀಡಿ, ಹುರಿದುಂಬಿಸಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಇನ್ನೂ ಹೆಚ್ಚಿನ ರೀತಿಯಲ್ಲಿ ಶ್ರಮಿಸಲಿ.

**ಯೋಗಾನಂದಮೂರ್ತಿ, ತಡಸೂರು**



ತುಮಕೂರು ಹಲಸು ರಾಷ್ಟ್ರ ಮಟ್ಟದಲ್ಲಿಜನಮನ್ನಣೆ ಗಳಿಸಿದೆ. ಇಲ್ಲಿರುವ ಸಿದ್ದು ಹಲಸು, ಚಂದ್ರ ಹಾಗೂ ಶಂಕರ ಹಲಸುಗಳು ಸಾಕಷ್ಟು ಜನಪ್ರಿಯತೆ ಗಳಿಸಿವೆ. ಆದರೆರೈತರು ಈ ಬೆಳೆಯಲ್ಲಿ ಯಾವುದೇಆದಾಯಕಾಣದೆ ಕೇವಲ ತಾವು ಹಾಗೂ ನೆರೆಹೊರೆಯವರುತಿನ್ನುವ ಹಣ್ಣೆಂದು ಬಾವಿಸಿದ್ದರು. ಹೀಗಾಗಿ ಈ ಬೆಳೆಯಿಂದಲೂ ಉತ್ತಮ ಲಾಭವಿದೆಎಂದುತೋರಿಸಲುರೈತರಿಂದ ನೇರವಾಗಿಗ್ರಾಹಕರಿಗೆ ಹಲಸಿನ ಹಣ್ಣು ಮಾರಾಟ ಮಾಡಲು ಪ್ರಾತ್ಯಕ್ಷಿಕೆ ಮಾಡಿಸಿದೆವು. ಇದಕ್ಕೆಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಮುಂದಿನ ದಿನಗಳಲ್ಲಿ ವಾರಕ್ಕೊಮ್ಮೆ ಈ ಪ್ರಾತ್ಯಕ್ಷಿಕೆಯನ್ನುರಾಷ್ಟ್ರೀಯ ಹೆದ್ದಾರಿಯಲ್ಲಿ ಹಮ್ಮಿಕೊಳ್ಳಲಾಗುವುದು.

**ಡಾ. ಗೋವಿಂದಗೌಡ ವಿ**



ಈ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ.ಗೋವಿಂದಗೌಡ ವಿ ರವರ ಮಾರ್ಗದರ್ಶನದಲ್ಲಿ ಮಾಡಲಾಯಿತು. ರೈತರಾದ ತಿಮ್ಲಾಪುರದ ಕುಮಾರಣ್ಣ, ತಡಸೂರಿನ ಯೋಗಾನಂದ, ಭರತ್ ನೇರವಾಗಿ ಗ್ರಾಹಕರಿಗೆ ಹಲಸಿನ ಹಣ್ಣನ್ನು ಮಾರಾಟ ಮಾಡಿದರು. ಕೆವಿಕೆಯ ವಿಜ್ಞಾನಿಗಳಾದ ಡಾ.ಕೀರ್ತಿಶಂಕರ್, ಡಾ. ದರ್ಶನ್, ಡಾ.ತಸ್ಮಿಯಾ, ಡಾ.ಮನೋಜ್ ಹಾಗೂ ಇತರೆ ರೈತರು ಭಾಗವಹಿಸಿದ್ದರು.




## ವಿಶ್ವ ಸ್ತನ್ಯಪಾನ ಸಪ್ತಾಹ

ಕೃಷಿ ವಿಜ್ಞನ ಕೇಂದ್ರ, ಕೊನೇಹಳ್ಳಿ, ತಿಪಟೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ತಿಪಟೂರು ಹಾಗೂ ಆಯುಷ್ ಆಸ್ಪತ್ರೆ, ಕೊನೇಹಳ್ಳಿ ಇವರ ಸಂಯುಕ್ತಾಶ್ರಯದೊಂದಿಗೆ ಸ್ತನ್ಯಪಾನ ಬೆಂಬಲಿಸುವುದರೊಂದಿಗೆ ಅಂತರವನ್ನು ಕಡಿತಗೊಳಿಸೊಣ ಎಂಬ ಘೋಷವಾಕ್ಯದೊಂದಿಗೆ ಈ ವರ್ಷದ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಕೊನೇಹಳ್ಳಿಯ ಕೆ.ವಿ.ಕೆ ಯಲ್ಲಿ ಆಚರಿಸಲಾಯಿತು.




ಕಾರ್ಯಕ್ರಮವನ್ನು ಉದ್ಘಾಟಿಸಿದ ಆಯುಷ್ ವೈದ್ಯಾಧಿಕಾರಿಯಾದ ಡಾ. ಸುಮನಾ ಮಾಡನಾಡಿ ಪ್ರತಿ ವರ್ಷ ಆಗಸ್ಟ್ 1 ರಿಮದ 7 ವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಜರುಗುತ್ತದೆ ಪ್ರತಿಯೊಬ್ಬ ತಾಯಿಯು ಮಗುವಿಗೆ ಎದೆಹಾಲನ್ನು ನೀಡುವುದರಿಂದ ತನ್ನ ಸೌಂದರ್ಯಕ್ಕೆ ಯಾವುದೇ ಧಕ್ಕೆ ಬರುವುದಿಲ್ಲ, ತಾಯಿಗೆ ಹೆಚ್ಚಿನ ಆರೋಗ್ಯ ಲಾಭಗಳಿದ್ದು ಮಗು ಮತ್ತು ತಾಯಿಯ ಬಾಂದವ್ಯ ವೃದ್ಧಿಸಲು ಸಹಕಾರಿಯಾಗಿದೆ ಎಂದರು. ಸತಾವರಿ ಬೇರು, ಸಬ್ಬಸಿಗೆ , ಹನಗನೆ ಸೊಪ್ಪು, ಒಂದಲಗ ಸೊಪ್ಪು, ದೇಸಿ ಹಸುವಿನ ಹಾಲು ಮತ್ತು ತುಪ್ಪ, ಬೆಲ್ಲ, ಶುಂಠಿ ಮತ್ತು ಜೀರಿಗೆಯ ಸೇವನೆಯಿಂದ ಸ್ತನ್ಯಪಾನ ವೃದ್ದಿ, ತಾಯಿಯ ದೇಹದ ಸ್ವಾಲ್ಯತೆ ಹಾಗು ಮಗುವಿಗೆ ಪೌಷ್ಠಿಕತೆ ಹೆಚ್ಚಲಿದೆ ಎಂದರು. ಆರ್ಥಿಕ ಸಮಾಲೋಚಕರಾದ ಶ್ರೀಮತಿ ರೇಖಾ ರವರು ಮಾಡನಾಡಿ ರಕ್ತದಾನ ಹೇಗೇ ಶ್ರೇಷ್ಠವೋ ಅದೇರೀತಿ ಎದೆ ಹಾಲು ಕೂಡ ಅದೆಷ್ಟೊ ನವಜಾತ ಶಿಶುಗಳಿಗೆ ಶೇಖರಿಸಿರೋ ಹಾಲುಗಳೇ ಮೊದಲ ಪಾನೀಯಗಳೆಂದು ಎದೆಹಾಲು ಬ್ಯಾಂಕ್ ಸ್ಥಾಪನೆಯಾಗಿದ್ದು, ತಾಯಂದಿರು ಈ ಸಮಾಜಮುಖಿ ಕಾರ್ಯಕ್ರಮದಲ್ಲಿ ಭಾಗಿಯಾಗುವಂತೆ ಕರೆಕೊಟ್ಟರು. ಕೇಂದ್ರದ ಗೃಹ ವಿಜ್ಞನಿ ಡಾ. ಸಿಂಧು ಮಾತನಾಡಿ ಮಗುವಿಗೆ ಒಂದು ವರ್ಷದವರೆಗೂ ಎದೆ ಹಾಲನ್ನು ಕುಡಿಸಬೇಕು ಇದರಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿರುತ್ತದೆ. ಇದರಿಂದ ತಾಯಂದಿರು ಸ್ತನ ಕ್ಯಾನ್ಸರ್ ನಂತಹ ರೋಗಗಳಿಗೆ ತುತ್ತಾಗುವುದಿಲ್ಲ ಸ್ತನ್ಯಪಾನವು ಮಗುವನ್ನು ಬ್ಯಾಕ್ಟೀರಿಯಾ, ವೈರಸ್‌ಗಳಿಂದ ಹರಡುವ ಕಾಯಿಲೆಗಳಿಂದ ಕಾಪಾಡುತ್ತದೆ ಎಂದರು. ಡಾ. ಶಿವಪ್ಪನಾಯಕರು ಪಶು ವಿಜ್ಞಾನಿಗಳು ಮಾತನಾಡಿ ತಾಯಿ ಮಗುವಿನ ಸಂಬಂಧ ಗರ್ಭದಲ್ಲಿ ಶುರುವಾಗಿ ಮುಗು ಜನಿಸಿದ ನಂತರ ಸ್ತನಪಾನದೊಂದಿಗೆ ಮುಂದುವರಿಯುತ್ತದೆ. ನಾಗರೀಕತೆ ಬೆಳೆದಂತೆ ಮಹಿಳೆಯರ ಕಾರ್ಯಕ್ಷೇತ್ರದಲ್ಲಿ ಬದಲಾವಣೆಯಾಗಿ, ತಾಯಿ ಮಗುವಿನ ಸಂಬಂಧದಲ್ಲಿ ಬದಲಾವಣೆಯಾಗಿ, ತಾಯಿ ಮಗುವಿನ ಸಂಬಂದದ ಮೇಲೆ ಪರಿಣಾಮವಾಗುತ್ತದೆ. ಇದರಿಂದ ತಾಯಂದಿರು ಹೆಚ್ಚೆತ್ತುಕೊಂಡು ಕನಿಷ್ಟ ಒಂದು ವರ್ಷ ಮಗುವಿಗೆ ಸ್ತನ್ಯಪಾನ ಮಾಡಬೇಕು ಹಾಗೂ ಆಹಾರ ಪದ್ಧತಿಯಲ್ಲಿ ಗಮನವಹಿಸಕೊಳ್ಳಬೇಕೆಂದರು. ಕೃಷಿ ವಿಸ್ತರಣಾ ವಿಜ್ಞಾನಿಯಾದ ಡಾ ದರ್ಶನ್ ಮಾತನಾಡಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಎದೆ ಹಾಲು ಕುಡಿಯುವ ಶಿಶುಗಳ ಬುದ್ದಿವಂತಿಕೆ ಮತ್ತು ಆರೋಗ್ಯ ಉತ್ತಮವಾಗಿರುತ್ತದೆ. ಎದೆ ಹಾಲು ಕುಡಿಯುವ ಮಕ್ಕಳಿಗೆ ಹೋಲಿಸಿದರೆ ಎದೆ ಹಾಲು ಸೇವಿಸುವ ಮಕ್ಕಳ ಅತಿ ತೂಕ, ಬೊಜ್ಜು ಮತ್ತು ಡಯಾಬಿಟಿಸ್‌ಗಳಿಂದ ಬಳಲುವ ಸಾಧ್ಯತೆ ಕಡಿಮೆ ಎಂದರು. ಶ್ರೀಮತಿ ಪ್ರೇಮರವರು, ಮೇಲ್ವಿಚಾರಕರು, ಮಾತನಾಡಿ ಎದೆ ಹಾಲು ದ್ರವರೂಪದ ಬಂಗಾರವೆಂದು ಹಾಗೂ ಪರಿಶುದ್ದವಾಗಿ ಸಿರುವ ಆಹಾರವೆಂದು ಕರಿಸಿಕೊಳ್ಳುವುದೆಂದರೆ ತಾಯಿಯ ಹಾಲು ಮಾತ್ರ. ವಿಶ್ವ ಆರೋಗ್ಯ ಸಂಸ್ಥೆ ತಾಯಂದರಿಗೆ ಮತ್ತು ಮಕ್ಕಳಿಗೆ ಸ್ತನ್ಯಪಾನ ಮೌಲ್ಯದ ಮಹತ್ವ ನೀಡುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೇಂದ್ರದ ಮುಖ್ಯಸ್ಥರಾದ ಡಾ. ವಿ. ಗೋವಿಂದಗೌಡ ರವರು ಮಾತನಾಡಿ ವಿಶ್ವ ಸ್ತನ್ಯಪಾನ ಸಪ್ತಾಹವು ಸ್ತನ್ಯಪಾನದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಮಹಿಳೆಯರಿಗೆ ತಮ್ಮ ಶಿಶುಗಳಿಗೆ ನಿರ್ದಿಷ್ಟ ಅವಧಿಯವರೆಗೆ ಹಾಲುಣಿಸಲು ಪ್ರೋತ್ಸಾಹಿಸುತ್ತಿದೆ ಎಂದರು. ಈ ಸಂದರ್ಭದಲ್ಲಿ ಭಾಗವಹಿಸಿದಂತಹ ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಆರೋಗ್ಯ ಕಿಟ್ ಅನ್ನು ವಿತರಿಸಲಾಯಿತು ಹಾಗೂ ಅಂಗನವಾಡಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ವಿಶ್ವಸ್ತನ್ಯಪಾನದ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು ಹಾಗೂ ರೈತ ಮಹಿಳೆಯರು ಸೇರಿದಂತೆ 115 ಜನರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ಶ್ರೀಶೈಲ ರವರು ನಿರೂಪಿಸಿದರು ಹಾಗೂ ಡಾ. ತಸ್ಮಿಯಾ ಕೌಸರ್ ರವರು ವಂದಿಸಿದರು.

## ನೀರಾ ಇಳಿಸುವ ತೆಂಗಿನ ಮರಕ್ಕೆ ಸಮಗ್ರ ಪೋಷಕಾಂಶಗಳ ನಿರ್ವಹಣೆ



ಕಲ್ಪತರು ನಾಡದ ತುಮಕೂರು ಜಿಲ್ಲೆಯು ಅತೀ ಹೆಚ್ಚು ತೆಂಗು ಬೆಳೆಯುವ ಪ್ರದೇಶವಾಗಿದ್ದು, ರೈತರು ಸಾಮಾನ್ಯವಾಗಿ ಎಳನೀರು, ಕೊಬ್ಬರಿ ಮತ್ತು ಕಾಯಿಗಳನಷ್ಟೇ ಪಡೆಯುತ್ತಿದ್ದಾರೆ. ಹೆಚ್ಚಿನ ಲಾಭಕ್ಕಾಗಿ ಮೌಲ್ಯವರ್ಧನೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕೆಲವೊಂದು ರೈತ ಉತ್ಪಾದಕರ ಸಂಘ / ಕಂಪನಿಗಳು ನೀರಾ ಇಳಿಸುವಿಕೆಯನ್ನು ಪ್ರಾರಂಭಿಸಿದ್ದು, ಹೆಚ್ಚಿನ ಲಾಭವನ್ನು ಪಡೆಯುವ ನಿಟ್ಟಿನಲ್ಲಿ ಹೆಜ್ಜೆಯಿಡುತ್ತಿದ್ದಾರೆ.

ರೈತರು ತೆಂಗಿನ ಬೆಳೆಯಲ್ಲಿ ಹೆಚ್ಚು ಆಧಾಯವನ್ನು ಬಯಸುತ್ತಿದ್ದು, ಆದರ ಪೋಷಕಾಂಶ ನಿರ್ವಹಣೆಯಲ್ಲಿ ಗಮನ ಹರಿಸದೆ ಕಡಿಮೆ ಗುಣಮಟ್ಟದ ಮತ್ತು ಅತೀ ಕಡಿಮೆ ಇಳುವರಿ ಪಡೆಯುತ್ತಿದ್ದಾರೆ. ನೀರಾ ಇಳಿಸುವ ತೆಂಗಿನ ಮರಕ್ಕೆ ಯಾವ ಪ್ರಮಾಣದ ಗೊಬ್ಬರವನ್ನು ನೀಡಬೇಕೆಂದು ರೈತರಲ್ಲಿ ಅರಿವು ಕಡಿಮೆ ಪ್ರಮಾಣದಲ್ಲಿದ್ದು, ಈ ನಿಟ್ಟಿನಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ, ತಿಪಟೂರು ವತಿಯಿಂದ ತುರುವೇಕೆರೆ ತಾಲ್ಲೂಕಿನ ಸೂಳೆಕೆರೆ ಗ್ರಾಮದಲ್ಲಿ "ನೀರಾ ಇಳಿಸುವ ತೆಂಗಿನ ಮರಕ್ಕೆ ಸಮಗ್ರ ಪೋಷಕಾಂಶಗಳ ನಿರ್ವಹಣೆ" ಎಂಬ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಕೇಂದ್ರದ ತೋಟಗಾರಿಕೆ ವಿಜ್ಞಾನಿಗಳಾದ ಡಾ.ಕೀರ್ತಿಶಂಕರ್‌ರವರು ಮಾತನಾಡಿ ತೆಂಗು ಅತೀ ಹೆಚ್ಚು ಪೋಷಕಾಂಶ ಮತ್ತು ನೀರು ಬಯಸುವ ಮರವಾಗಿದ್ದು, ಮುಂಗಾರಿನಲ್ಲಿ ಒಮ್ಮೆ ಪ್ರತಿ ತೆಂಗಿನ ಮರದ ಸುತ್ತಲೂ 5 ರಿಂದ 6 ಅಡಿ ಅಂತರದಲ್ಲಿ ಪಾತಿಗಳನ್ನು ಮಾಡಿ 25 ಕೆ.ಜಿ. ಕೊಟ್ಟಿಗೆ ಗೊಬ್ಬರ, 3 ಕೆ.ಜಿ. ಬೇವಿನ ಹಿಂಡಿ, 500 ಗ್ರಾಂ ಯೂರಿಯಾ, 1 ಕೆ.ಜಿ. ಸಿಂಗಲ್ ಸೂಪರ್ ಪಾಸ್ಪೇಟ್, 900 ಗ್ರಾಂ ಪೋಟ್ಯಾಷ್, 100 ಗ್ರಾಂ ಟ್ರೈಕೊಡರ್ಮ, 100 ಗ್ರಾಂ ಸೂಡೊಮಾಸನ್, 50 ಗ್ರಾಂ ಬೋರಾಕ್ಸ್ ಮತ್ತು 50 ಗ್ರಾಂಜಿಂಕ್ ಸಲ್ಪೇಟ್ ಹಾಕಬೇಕು. ಇದೇ ಪ್ರಮಾಣದ ಗೊಬ್ಬರವನ್ನು ಹಿಂಗಾರಿನಲ್ಲಿ ಒಮ್ಮೆ ನೀಡಿದರೆ ಉತ್ತಮ ಇಳುವರಿ ಪಡೆಯಬಹುದು ಎಂದು ತಿಳಿಸಿದರು. ನೀರಾ ಇಳಿಸುವ ತೆಂಗಿನ ಮರಕ್ಕೆ ಹೆಚ್ಚು ಪೋಷಕಾಂಶಗಳ ಅವಶ್ಯಕವಿದ್ದು ಅದನ್ನು ಕಂಡುಹಿಡಿಯುವ ನಿಟ್ಟಿನಲ್ಲಿ 7 ಜನ ರೈತರ ತಾಕಿನಲ್ಲಿ ಕ್ಷೇತ್ರ ಪ್ರಯೋಗವನ್ನು ಹಮ್ಮಿಕೊಂಡಿದ್ದು ಮುಂದಿನ ದಿನಗಳಲ್ಲಿ ಫಲಿತಾಂಶದೊರೆಯುತ್ತದೆಎಂದು ತಿಳಿಸಿದರು.

ಕೇಂದ್ರದ ಗೃಹ ವಿಜ್ಞಾನಿಗಳಾದ ಡಾ. ಸಿಂಧು ಪಿ.ಬಿ. ರವರು ಮಾತನಾಡಿ ನೀರಾ ಕಲ್ಪರಸವಾಗಿದ್ದು, ಇದರಲ್ಲಿ ವಿಟಮಿನ್ –ಸಿ, ಪೊಟಾಷಿಯಂ, ಕ್ಯಾಲ್ಸಿಯಂ ಮತ್ತು ಮುಂತಾದ ಪೋಷಕಾಂಶಗಳ ಮೂಲವಾಗಿದ್ದುಇದನ್ನು ಸೇವಿಸುವುದರಿಂದ ಹೃದಯ ಆರೋಗ್ಯ, ಜೀರ್ಣಕ್ರೀಯೆ, ಎಲುಬಿನ ಆರೋಗ್ಯ, ಚರ್ಮದ ಆರೋಗ್ಯ ಹಾಗೂ ಮಧುಮೇಹಿಗಳಿಗೂ ಲಾಭಕಾರಿ. ನೀರಾದಿಂದ ವಿವಿಧ ಮೌಲ್ಯವರ್ಧಿತ ಉತ್ಪನ್ನ ಪದಾರ್ಥಗಳಾದ, ನೀರಾ ಸಕ್ಕರೆ, ಬೆಲ್ಲ, ವಿನೆಗರ್, ನೀರಾಗ್ಲೂಕೋಸ್, ಸಿರಾಪ್ ಮುಂತಾದವನ್ನು ತಯಾರಿಸಬಹುದು. ನೀರಾವನ್ನು ಸಾಮಾನ್ಯವಾಗಿ 40 ಸೆಂಟಿಗ್ರೇಡ್ ಒಳಗೆ ಶೇಖರಿಸಿದರೆ ಕೆಲವು ದಿನಗಳ ಕಾಲ ಉಪಯೋಗಿಸಬಹುದುಎಂದು ಮಾಹಿತಿ ನೀಡಿದ್ದಾರೆ.ಈ ಮೌಲ್ಯವರ್ಧಿತ ಉತ್ಪನ್ನಗಳು ನೀರಾದ ವಾಣಿಜ್ಯ ಬೆಲೆಯಲ್ಲಿ ಸಹ ಹೆಚ್ಚಳವನ್ನು ಒದಗಿಸುತ್ತವೆ ಮತ್ತು ರೈತರು ಮತ್ತು ರೈತ ಉತ್ಪಾದಕರ ಸಂಘಗಳಿಗೂ ಆಧಾಯದ ಮೂಲವಾಗಬಹುದು ಎಂದು ಕರೆಕೊಟ್ಟರು.

## ರಾಷ್ಟ್ರೀಯ ಪೋಷಣ ಮಾಸಾಚರಣೆ ಹಾಗೂ ಅಣಬೆ ಕೃಷಿ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿ



ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿಯಲ್ಲಿ 20–09–2024ರಂದು "ರಾಷ್ಟ್ರೀಯ ಪೋಷಣ ಮಾಸಾಚರಣೆ" ಅಂಗವಾಗಿ ಅಣಬೆ ಕೃಷಿ ಕುರಿತು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ರಾಷ್ಟ್ರೀಯ ಪೋಷಣ ಮಾಸ 2024, "ಏಕ್ ಪೇಡ್ ಮಾ ಕೆ ನಾಮ್ (ತಾಯಿಯ ಹೆಸರಲ್ಲಿ ಒಂದು ಗಿಡ)" ಎಂಬ ರಾಷ್ಟ್ರ ವ್ಯಾಪಿ ಪ್ಲಾಂಟೇಷನ್ ಡ್ರೈವ್‌ನೊಂದಿಗೆ ಪ್ರಾರಂಭವಾಯಿತು.

ಈ ಮಾಸಾಚರಣೆಯ ಪ್ರಮುಖ ವಿಷಯಗಳು ರಕ್ತಹೀನತೆ, ಬೆಳವಣಿಗೆಯ ಮೇಲ್ವಿಚಾರಣೆ, ಪೂರಕ ಆಹಾರ, ಪೋಷಣ್ ಭಿ ಪಡಾಯಿ ಮತ್ತು ಉತ್ತಮ ಆಡಳಿತಕ್ಕಾಗಿ ತಂತ್ರಜ್ಞಾನ ಎಂಬುದರ ಕುರಿತು ಎಂದು ಶ್ರೀ ಲೋಕೇಶ್, ಶಿಶು ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಇಲಾಖೆ ತಿಪಟೂರು ಇವರು ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ಗೋವಿಂದ ಗೌಡ ವಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಡುತ್ತಾ ಭಾರತದಲ್ಲಿ ಪೌಷ್ಟಿಕಾಂಶ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ತುರ್ತು ಅಗತ್ಯವಿದೆ, ಹದಿಹರೆಯದ ಹುಡುಗಿಯರು, ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು 6 ವರ್ಷದೊಳಗಿನ ಮಕ್ಕಳ ಪೌಷ್ಟಿಕಾಂಶದ ಅಗತ್ಯಗಳನ್ನು ಕೇಂದ್ರಿಕರಿಸುವ ಮೂಲಕ ಅಪೌಷ್ಟಿಕತೆಯನ್ನು ಪರಿಹರಿಸಲು ಮಾರ್ಚ್ 2018ರಲ್ಲಿ "ರಾಷ್ಟ್ರೀಯ ಪೋಷಣ ಮಾಸಾಚರಣೆ"ಯನ್ನು ಪ್ರಾರಂಭಿಸಲಾಯಿತು ಎಂದು ತಿಳಿಸಿದರು.

ರಾಷ್ಟ್ರೀಯ ಪೋಷಣ ಮಾಸಾಚರಣೆಯು ಮಕ್ಕಳು, ಮಹಿಳೆಯರು ಮತ್ತು ಪುರುಷರಲ್ಲಿ ಹೆಚ್ಚುತ್ತಿರುವ ರಕ್ತಹೀನತೆ ಮತ್ತು ವಿಟಮಿನ್ ಕೊರತೆಗಳ ಕಾರಣದಿಂದ ಪೌಷ್ಟಿಕಾಂಶದ ಬಗ್ಗೆ ಜಾಗೃತಿಯನ್ನು ಹೆಚ್ಚಿಸುವುದು, ಆಹಾರ ಪದ್ಧತಿಗಳನ್ನು ಸುಧಾರಿಸುವುದು ಮತ್ತು ಅಪೌಷ್ಟಿಕತೆಯ ವಿರುದ್ಧದ ಹೋರಟದ ಮೇಲೆ ಕೇಂದ್ರಿಕರಿಸುತ್ತವೆ. ರಾಷ್ಟ್ರೀಯ ಪೋಷಣ ಮಾಸಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ "ಅಣಬೆ ಕೃಷಿ ಕುರಿತು ಕೌಶಲ್ಯಭಿವೃದ್ಧಿ ತರಬೇತಿ"ಯಲ್ಲಿ, ಅಣಬೆ ಸಾಮನ್ಯವಾಗಿ ನೆಲದ ಮೇಲೆ ಬೆಳೆಯುವ ಒಂದು ವಿಧದ ಶಿಲೀಂದ್ರ. ವಿಶೇಷ ರುಚಿ, ವಿವಿಧ ಬಣ್ಣ, ಗಾತ್ರ ಮತ್ತು ಆಕಾರಗಳಲ್ಲಿರುವ ಅಣಬೆಗಳು ಉತ್ತಮ ಪೌಷ್ಟಿಕಾಂಶಗಳುಳ್ಳ ಆಹಾರವಾಗಿದೆ. ಇದರಲ್ಲಿ ಕೊಬ್ಬು ಹಾಗೂ ಕ್ಯಾಲೋರಿ ಕಡಿಮೆ ಇರುವುದರಿಂದ ತೂಕ ನಿರ್ವಹಣೆಗೆ ಸಹಕಾರಿ, ಹೆಚ್ಚಿನ ಪ್ರಮಾಣದ ಅಗತ್ಯ ಪೋಷಕಾಂಶಗಳಾದ ಪ್ರೋಟೀನ್, ನಾರು, ವಿಟಮಿನ್–ಬಿ, ಕಬ್ಬಿಣ, ಪೊಟ್ಯಾಶಿಯಂ, ಸೆಲೇನಿಯಂ ನಂತಹ ಖನಿಜಗಳು ಹೃದಯದ ರಕ್ತನಾಳಗಳ ಆರೋಗ್ಯ, ಮೆದುಳಿನ ಆರೋಗ್ಯ, ರಕ್ತದಲ್ಲಿನ ಸಕ್ಕರೆ ಪ್ರಮಾಣದ ನಿಯಂತ್ರಣೆ, ಜೀರ್ಣಾಂಗದ ವ್ಯವಸ್ಥೆ ಹಾಗೂ ಕ್ಯಾನ್ಸರ್ ತಡೆಗಟ್ಟಲು ಅಣಬೆ ಪ್ರಸಿದ್ಧಿಯನ್ನು ಕಾಣುತ್ತಿದೆ. ನಾವುತಿನ್ನುವ ಆಹಾರ ಔಷಧಿ ಆಗಬೇಕೆ ವಿನಃ ಔಷಧಿಯೇ ಆಹಾರವಾಗಬಾರದು. ಆರೋಗ್ಯವೇ ಭಾಗ್ಯ ಎಂದು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ (ಗೃಹ ವಿಜ್ಞಾನ) ಡಾ. ಸಿಂಧು ಪಿ.ಬಿ., ಮನವರಿಕೆ ಮಾಡಿದರು.

ಪೋಷಣ ಅಭಿಯಾನದ ಅಡಿಯಲ್ಲಿ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕ:ಳ ಅಭಿವೃದ್ಧಿ ಸಚಿವಾಲಯವು "ಪೋಷಣ್ ಟ್ರ್ಯಾಕರ್" ಎಂಬ ಮೊಬೈಲ್ ಫೋನ್ ಅಪ್ಲಿಕೇಶನನ್ನು ಮಾರ್ಚ್ ತಿಂಗಳು 2021ರಲ್ಲಿ ಭಾರತದಲ್ಲಿನ ಮಕ್ಕಳು ಮತ್ತು ಗರ್ಭಿಣಿಯರ ಆರೋಗ್ಯ ಮತ್ತು ಪೋಷಣೆಯಲ್ಲಿ ಟ್ರ್ಯಾಕ್ ಮಾಡಲು ಪ್ರಾರಂಭಿಸಲಾಯಿತು. ರಾಷ್ಟ್ರೀಯ ಪೋಷಣ ಮಾಸವನ್ನು ಪ್ರತೀ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಪೋಷಣ್ ಅಭಿಯಾನದ ಸಮಗ್ರ ಪೋಷಣೆಗಾಗಿ ಪ್ರಧಾನ ಮಂತ್ರಿಯವರ ಸಮಗ್ರ ಯೋಜನೆ ಅಡಿ ಆಚರಿಸಲಾಗುತ್ತದೆ ಎಂದು ಶ್ರೀಮತಿ ಪ್ರೇಮ ಬಿ.ಎನ್. ಮೇಲ್ವಿಚಾರಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾಹಿತಿ ನೀಡಿದರು.

ಅಣಬೆಯನ್ನು ವೈಜ್ಞಾನಿಕವಾಗಿ ಬೆಳೆಯುವುದರ ಕುರಿತು ಹಾಗೂ ಬೆಳೆಯುವ ಸಮಯದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ವಿಷಕಾರಿ ಹಾಗೂ ಸೇವಿಸಬಹುದಾದ ಅಣಬೆಗಳ ನಡುವಿನ ವ್ಯತ್ಯಾಸ, ಅಣಬೆಯ ಮಾರುಕಟ್ಟೆಯ ಬಗ್ಗೆ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ (ತೋಟಗಾರಿಕೆ) ಡಾ. ಕೀರ್ತಿ ಶಂಕರ್ ಇವರು ಮಾಹಿತಿ ನೀಡಿದರು.

ಅಣಬೆ ತರಬೇತಿಗೆ ಬಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿಯನ್ನು ಹಾಗೂ ಪ್ರಾತ್ಯಕ್ಷಿತೆಯನ್ನು ಅಣಬೆ ಬೆಳೆಗಾರರಾದ ಹಾಗಲವಾಡಿಯ ಶ್ರೀಮತಿ ಗಂಗಲಕ್ಷ್ಮೀ ಹಾಗೂ ಶ್ರೀ ಯೋಗೇಶ್ ರಾವ್ ನೀಡಿದರು. ಅಂಗನವಾಡಿ ಕಾರ್ಯಕರ್ತೆಯರು ರಾಷ್ಟ್ರೀಯ ಪೋಷಣ ಮಾಸಾಚರಣೆ ಪ್ರಯುಕ್ತ "ಬೆಂಕಿಯಿಂದ ಬೇಯಿಸದೇ" ಇರುವ ಆಹಾರ ಪದಾರ್ಥಗಳ ಬಳಕೆ ಬಗ್ಗೆ ಪ್ರಾತ್ಯಕ್ಷಿಕೆ ತೊರಿಸಿಕೊಟ್ಟರು.

ಕರ್ನಾಟಕ ಜನ ಜಾಗೃತಿ ವೇದಿಕೆ ಮತ್ತು ಜೆಮ್ಸ್ ಫೌಂಡೇಷನ್‌ನ ತರಕಾರಿ ಗಂಗಾಧರ್, ಹೊನ್ನವಳ್ಳಿ ಸಮೂದಾಯ ಆರೋಗ್ಯ ಅಧಿಕಾರಿಗಳಾದ ಕುಮಾರಿ ಬಿಂದು ಹಾಗೂ ನಾಗರತ್ನ, ನಗರಸಭಾ ಸದಸ್ಯೆ ಡಾ. ಓಹಿಲಾ, ಸಿರಿಗಂಧ ಗುರು, ಅಖಿಲಾ, ತಡಸೂರಿನ ಪ್ರಗತಿಪರ ರೈತ ಯೋಗಾನಂದ ಮೂರ್ತಿ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ (ತೋಟಗಾರಿಕೆ), ಡಾ. ಕೀರ್ತಿಶಂಕರ್ ಕೆ., ವಿಜ್ಞಾನಿ (ಬೇಸಾಯ ಶಾಸ್ತ್ರ) ಡಾ. ತಸ್ಮೀಯಾ ಕೌಸರ್, ಅಂಗನವಾಡಿ ಕಾರ್ಯಕರ್ತೆಯರು ಇದ್ದರು. ಕಾರ್ಯಕ್ರಮದ ನೀರೂಪಣೆಯನ್ನು ವಿಜ್ಞಾನಿ (ಕೃಷಿ ವಿಸ್ತರಣೆ) ಡಾ. ದರ್ಶನ್ ಎಂ.ಈ., ಇವರು ಸುಸೂತ್ರವಾಗಿ ನೆರವೇರಿಸಿದರು.

# ತರಬೇತಿ ಕಾರ್ಯಕ್ರಮಗಳು

## ಒಳ ಅವರಣ ತರಬೇತಿಗಳು

| ಕ್ರ.ಸಂ. | ಒಳ ಅವರಣ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|
| 1 | ಮಣ್ಣಿನ ಪೋಷಕಾಂಶಗಳು ಮತ್ತು ನಿರ್ವಹಣೆ | 03/07/2024 | 36 |
| 2 | ಮಣ್ಣಿನ ಪೋಷಕಾಂಶಗಳು ಮತ್ತು ನಿರ್ವಹಣೆ | 09/07/2024 | 36 |
| 3 | ಮಣ್ಣಿನ ಪೋಷಕಾಂಶಗಳು ಮತ್ತು ನಿರ್ವಹಣೆ | 17/07/2024 | 36 |
| 4 | ಮಣ್ಣಿನ ಪೋಷಕಾಂಶಗಳು ಮತ್ತು ನಿರ್ವಹಣೆ | 23/07/2024 | 36 |
| 5 | ಸುವರ್ಣ ಮಹೋತ್ಸವದ ಜ್ಯೋತಿ ಸ್ವೀಕಾರ ಆಚರಣೆ | 10/08/2024 | 80 |
| 6 | ಮಣ್ಣಿನ ವಿಧಗಳು ಮತ್ತು ಅದರ ಗುಣಲಕ್ಷಣಗಳು | 11/08/2024 | 60 |
| 7 | ಬೀಜಗಳು, ಬೀಜಗಳ ವಿಧಗಳು ಮತ್ತು ಬೀಜೋಪಚಾರ | 11/08/2024 | 60 |
| 8 | ಗೊಬ್ಬರ ತಯಾರಿಕೆಯ ವಿವಿಧ ವಿಧಾನಗಳು | 29/08/2024 | 60 |
| 9 | ಅಣಬೆ ಕೃಷಿ ಮತ್ತು ಮೌಲ್ಯವರ್ಧನೆ | 20/09/2024 | 65 |





# ಹೊರ ಅವರಣ ತರಬೇತಿಗಳು

| ಕ್ರ.ಸಂ. | ಹೊರಾವರಣ | ಸ್ಥಳ | ದಿನಾಂಕ | ರೈತರು |
|---|---|---|---|---|
| 1 | ರಾಗಿ ಮತ್ತು ಅಪ್ಪೆಸೆಣಬುವಿನ ಸಮಗ್ರ ಬೆಳೆ ನಿರ್ವಹಣೆ | ಕಾಳಮ್ಮನಬೆಟ್ಟ | 23/07/2024 | 35 |
| 2 | ಮಣ್ಣು ಮಾದರಿ ತೆಗೆಯುವ ಪ್ರಾತ್ಯಕ್ಷಿಕೆ, ಮಣ್ಣು ಮತ್ತು ನೀರು ಪರೀಕ್ಷೆಯ ಮಹತ್ವ | ಕಂದಿಕೆರೆ | 02/07/2024 | 200 |
| 3 | ಮಣ್ಣು ಮಾದರಿ ತೆಗೆಯುವ ಪ್ರಾತ್ಯಕ್ಷಿಕೆ, ಮಣ್ಣು ಮತ್ತು ನೀರು ಪರೀಕ್ಷೆಯ ಮಹತ್ವ | ಕೆಂಕೆರೆ | 02/07/2024 | 250 |
| 4 | ತೊಗರಿಯ ಸಮಗ್ರ ಬೆಳೆ ನಿರ್ವಹಣೆ | ದೇವಿಹಳ್ಳಿ | 05/07/2024 | 20 |
| 5 | ಸಿರಿಧಾನ್ಯಗಳ ಉತ್ಪಾದನೆ ಪದ್ಧತಿಗಳು | ಪರುವಗೊಂಡನಹಳ್ಳಿ | 08/07/2024 | 20 |
| 6 | ಬದನೆಯ ಸಮಗ್ರ ಬೆಳೆ ನಿರ್ವಹಣೆ | ಪಟ್ರೇಹಳ್ಳಿ | 23/08/2024 | 18 |
| 7 | ಸಾಮೆ ತಳಿ ಜಿ.ಪಿ.ಯು.ಎಲ್. – 6 ನ ಸಮಗ್ರ ಬೆಳೆ ನಿರ್ವಹಣೆ | ಪಟ್ರೇಹಳ್ಳಿ | 23/08/2024 | 16 |
| 8 | ತೆಂಗಿನ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಬೂಲೆಕೆರೆ | 15/08/2024 | 15 |
| 9 | ಮಳೆಯಾಶ್ರಿತ ರಾಗಿಯ ಉತ್ಪಾದನಾ ತಾಂತ್ರಿಕತೆಗಳು | ಪರುವಗೊಂಡನಹಳ್ಳಿ | 01/08/2024 | 13 |










# ಪ್ರಾಯೋಜಿತ ತರಬೇತಿಗಳು

| ಕ್ರ.ಸಂ. | ವಿಷಯ | ದಿನಾಂಕ | ಒಟ್ಟು |
|---|---|---|---|
| 1 | ಕೃಷಿ ಸಖಿ ತರಬೇತಿ | 01/07/2024 ರಿಂದ 05/07/2024 ರವರಗೆ | 36 |
| 2 | ಕೃಷಿ ಸಖಿ ತರಬೇತಿ | 08/07/2024 ರಿಂದ 12/07/2024 ರವರಗೆ | 36 |
| 3 | ಕೃಷಿ ಸಖಿ ತರಬೇತಿ | 15/07/2024 ರಿಂದ 19/07/2024 ರವರಗೆ | 36 |
| 4 | ಕೃಷಿ ಸಖಿ ತರಬೇತಿ | 20/07/2024 ರಿಂದ 24/07/2024 ರವರಗೆ | 36 |
| 5 | ಕೃಷಿ ಸಖಿ ತರಬೇತಿ | 25/07/2024 ರಿಂದ 29/07/2024 ರವರಗೆ | 36 |
| 6 | ಕೃಷಿ ಸಖಿ ತರಬೇತಿ | 08/08/2024 ರಿಂದ 12/08/2024 ರವರಗೆ | 36 |
| 7 | ಕೃಷಿ ಸಖಿ ತರಬೇತಿ | 26/08/2024 ರಿಂದ 31/08/2024 ರವರಗೆ | 36 |
| 8 | ಕೃಷಿ ಸಖಿ ಮಾಡ್ಯೂಲ್ 2 ತರಬೇತಿ | 09/09/2024 ರಿಂದ 14/09/2024 ರವರಗೆ | 32 |
| 9 | ಕೃಷಿ ಸಖಿ ಮಾಡ್ಯೂಲ್ 2 ತರಬೇತಿ | 16/09/2024 ರಿಂದ 21/09/2024 ರವರಗೆ | 35 |
| 10 | ಕೃಷಿ ಸಖಿ ಮಾಡ್ಯೂಲ್ 2 ತರಬೇತಿ | 16/09/2024 ರಿಂದ 21/09/2024 ರವರಗೆ | 34 |









# ಪ್ರಮುಖ ದಿನಗಳು / ಕಾರ್ಯಕ್ರಮಗಳು ಹಾಗೂ ಕ್ಷೇತ್ರೋತ್ಸವಗಳು

| ಕ್ರ.ಸಂ. | ವಿಷಯ | ಸ್ಥಳ | ದಿನಾಂಕ | ಒಟ್ಟು ಶಿಬಿರಾರ್ಥಿಗಳು |
|---|---|---|---|---|
| 1 | ಐ.ಸಿ.ಎ.ಅರ್. ನ 96ನೇ ಸಂಸ್ಥಾಪನಾ ದಿನದ ಸಂಧರ್ಭದಲ್ಲಿ ವನಮಹೋತ್ಸವ | ಕಾಳಮ್ಮನಬೆಟ್ಟ | 16.07.2024 | 35 |
| 2 | ಐ.ಸಿ.ಎ.ಅರ್. ನ 96ನೇ ಸಂಸ್ಥಾಪನಾ ದಿನದ ಸಂಧರ್ಭದಲ್ಲಿ ವನಮಹೋತ್ಸವ | ಕಮಲಾಪುರ | 16.07.2024 | 55 |
| 3 | ರೈತರಿಂದ ಗ್ರಾಹಕರಿಗೆ ಹಲಸಿನ ಹಣ್ಣಿನ ನೇರ ಮಾರಾಟ | ಎನ್.ಹೆಚ್. ರಸ್ತೆ, ಬಿದರೇಗುಡಿ | 18.07.2024 | 100 |
| 4 | ರೈತರಿಂದ ಗ್ರಾಹಕರಿಗೆ ಹಲಸಿನ ಹಣ್ಣಿನ ನೇರ ಮಾರಾಟ | ಎನ್.ಹೆಚ್. ರಸ್ತೆ, ಬಿದರೇಗುಡಿ | 26.07.2024 | 120 |
| 5 | ರೈತರಿಂದ ಗ್ರಾಹಕರಿಗೆ ಹಲಸಿನ ಹಣ್ಣಿನ ನೇರ ಮಾರಾಟ | ಎನ್.ಹೆಚ್. ರಸ್ತೆ, ಬಿದರೇಗುಡಿ | 03/08/2024 | 35 |
| 6 | ರೈತರಿಂದ ಗ್ರಾಹಕರಿಗೆ ಹಲಸಿನ ಹಣ್ಣಿನ ನೇರ ಮಾರಾಟ | ಎನ್.ಹೆಚ್. ರಸ್ತೆ, ಬಿದರೇಗುಡಿ | 13/08/2024 | 45 |
| 7 | ವಿಶ್ವ ಸ್ಥನ್ಯಪಾನ ಸಪ್ತಾಹ 2024 | ಕೆ.ವಿ.ಕೆ., ತಿಪಟೂರು | 07/08/2024 | 65 |
| 8 | ವನಮಹೋತ್ಸವ ಕಾರ್ಯಕ್ರಮ | ಪಟ್ರೇಹಳ್ಳಿ | 15/08/2024 | 32 |
| 9 | ಸ್ವಾತಂತ್ರ್ಯ ದಿನಾಚರಣೆ | ಕೆ.ವಿ.ಕೆ., ಕೊನೇಹಳ್ಳಿ | 15/08/2024 | 25 |
| 10 | ಪಾರ್ಥೇನಿಯಂ ನಿಮೂಲನಾ ಜಾಗ್ರತಿ ಸಪ್ತಾಹ | ಎಲ್.ಆರ್.ಐ.ಸಿ., ಕೊನೇಹಳ್ಳಿ | 21/08/2024 | 65 |
| 11 | ವಿಶ್ವ ತೆಂಗು ದಿನಾಚರಣೆ | ತಿಪಟೂರು | 02/09/2024 | 350 |
| 12 | ವಿಶ್ವ ತೆಂಗು ದಿನಾಚರಣೆ | ರಾಮನಗರ | 18/09/2024 | 145 |
| 13 | ರಾಷ್ಟ್ರೀಯ ಪೋಷಣಾ ತಿಂಗಳು | ಕೆ.ವಿ.ಕೆ., ಕೊನೇಹಳ್ಳಿ | 20/09/2024 | 50 |
| 14 | ದೇಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ | ಕೆ.ವಿ.ಕೆ., ಕೊನೇಹಳ್ಳಿ | 20/09/2024 | 40 |
| 15 | ಸ್ವರ್ಣಭೂಮಿ ರೈತ ಉತ್ಪಾದಕರ ಕಂಪನಿಯ ವಾರ್ಷಿಕೋತ್ಸವ ಕಾರ್ಯಕ್ರಮ | ದಬ್ಬೇಘಟ್ಟ, ತುರುವೇಕೆರೆ | 30/09/2024 | 60 |









## ಸಮಸ್ಯಾತ್ಮಕ ಕ್ಷೇತ್ರ ಭೇಟಿ

| ಕ್ರ..ಸಂ. | ದಿನಾಂಕ | ಸ್ಥಳ | ವಿಷಯ | ರೈತರು |
|---|---|---|---|---|
| | 30/07/2024 | ಕುಣಿಗಲ್ | ಕಪ್ಪು ಮೂತಿ ಹುಳು ಭಾದಿತ ತೆಂಗಿನ ತೋಟಕ್ಕೆ ಕ್ಷೇತ್ರ ಭೇಟಿ | 15 |
| | 17/09/2024 | ಗುಬ್ಬಿ | ಪ್ಯುಸರಿಯಂ ಸೊರಗು ರೋಗ ಭಾದಿತ ಬಾಳೆ ತೋಟಕ್ಕೆ ಕ್ಷೇತ್ರ ಭೇಟಿ | 30 |
| | 17/09/2024 | ಚೊಡನಕುಪ್ಪೆ | ರುಗೋಸ್ ಬಿಳಿ ನೊಣ ಭಾದಿತ ತೆಂಗಿನ ತೋಟಕ್ಕೆ ಕ್ಷೇತ್ರ ಭೇಟಿ | 20 |
| | 30/09/2024 | ಕುಣಿಗಲ್ | ಕಪ್ಪು ಮೂತಿ ಹುಳು ಭಾದಿತ ತೆಂಗಿನ ತೋಟಕ್ಕೆ ಕ್ಷೇತ್ರ ಭೇಟಿ | 10 |
| | 30/09/2024 | ತುರುವೇಕೆರೆ | ಕಾಂಡ ರಸ ಸೋರುವ ರೋಗ ಭಾದಿತ ತೆಂಗಿನ ತೋಟಕ್ಕೆ ಕ್ಷೇತ್ರ ಭೇಟಿ | 12 |



## ಪದ್ಧತಿ ಪ್ರಾತ್ಯಕ್ಷಿಕೆ

| ಕ್ರ.ಸಂ. | ದಿನಾಂಕ | ವಿಷಯ | ಸ್ಥಳ | ರೈತರು |
|---|---|---|---|---|
| 1 | 02.07.2024 | ಮಣ್ಣು ಮಾದರಿ ತೆಗೆಯುವ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ಶೆಟ್ಟಿಕೆರೆ | 32 |
| 2 | 02.07.2024 | ಮಣ್ಣು ಮಾದರಿ ತೆಗೆಯುವ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ಹಂದನಕೆರೆ | 39 |
| 3 | 03.07.2024 | ತೆಂಗಿನ ತೋಟದಲ್ಲಿ ಕಪ್ಪು ಮೂತಿ ಹುಳು ನಿರ್ವಹಣೆ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ಇಪ್ಪಾಡಿ | 34 |
| 4 | 02.07.2024 | ಮಣ್ಣು ಮಾದರಿ ತೆಗೆಯುವಿಕೆ ಮತ್ತು ಮಣ್ಣು ಮತ್ತು ನೀರು ಪರೀಕ್ಷೆಯ ಮಹತ್ವದ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ಕಂದಿಕೆರೆ | 32 |
| 5 | 02.07.2024 | ಮಣ್ಣು ಮಾದರಿ ತೆಗೆಯುವಿಕೆ ಮತ್ತು ಮಣ್ಣು ಮತ್ತು ನೀರು ಪರೀಕ್ಷೆಯ ಮಹತ್ವದ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ಕೆಂಕೆರೆ | 48 |
| 6 | 10.09.2024 | ಕೃಷಿ ಬೆಳೆಗಳಿಗೆ ಡ್ರೋನ್ ಉಪಯೋಗಿಸಿ ಪೋಷಕಾಂಶ ಸಿಂಪರಣೆ ತಂತ್ರಜ್ಞಾನದ ಪದ್ಧತಿ ಪ್ರಾತ್ಯಕ್ಷಿಕೆ | ತಿಪಟೂರು | 160 |
| 7 | 25.09.2024 | ಮಣ್ಣು ಮಾದರಿ ತೆಗೆಯುವಿಕೆ ಮತ್ತು ಮಹತ್ವದ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ | ತಿಮ್ಮಲಾಪುರ | 42 |






**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು:**

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,**
**ಐ.ಸಿ.ಎ.ಆರ್ –ಕೃಷಿ ವಿಜ್ಞಾನ ಕೇಂದ್ರ, ಕೊನೇಹಳ್ಳಿ,**
**ತಿಪಟೂರು, ತುಮಕೂರು ಜಿಲ್ಲೆ**